ಕೋಲಾರ ಡಿಸ್ಟ್ರಿಕ್ಟು.

ತಾರೀಖು 8ನೇ ಮೇ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿಕ್ಕಬಳ್ಳಾಪುರದ ಟರ್ನಲ್ಲಿರುವ ಹಳೇ ತಾಲ್ಲೂಕು ಕಚೇರಿ ಕಟ್ಟಡ ನಿವೇಶನ ಸಹಿತ ಸ್ಯ 1884ನೇ ಅಸವಿ ಜೂ|| ತಾರೀಖು 2ನೇ ದಿವಿ 11 ಘಂಟೆಗೆ ಆ ತಾಲ್ಲೂಕು ಅಮಲ್ದಾರ್ರವರ ರೂಬರೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಯಿಚ್ಛೈವುಳ್ಳವರು ಆ ಕಾಲಕ್ಕೆ ಸರಿಯಾಗಿ ಹಾಜರಾಗಿ ಧಾರಾಳವಾಗಿ ಸವಾಲ್ ಮಾಡಬಹುದು, ಹರಾಜು ಕೈದಾದ ಮೇಲೆ ಬರುವ ಸವಾಲ್ ಮಂಜೂರ್ ಮಾಡಲ್ಪಡುವದಿಲ್ಲ.

2. ಈ ಹರಾಜು ದೀವಾ|| ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಹರಾಜು ಕೈದಾದ ವಡನೆ ಚಡ ಸವಾಲ್ದಾರನು ಅವನ ಸವಾಲ್ ಮೊಬಲಗು ಪೈಕೀ 4ರಲ್ಲಿ ವಂದು ಹಿಸ್ಸೆ ತೇವಣಿ ಯಿಡಬೇಕು, ಯಿಡುವದಕ್ಕೆ ತಪ್ಪಿದರೆ ದುಸರಾ ಹರಾಜು ಹಾಕಿಸಲ್ಪಡುತ್ತೆ, ಕಮ್ಮಿ ಬಿದ್ದ ಮೊಬಲಗು ಚಡ ಸವಾಲ್ದಾರನ ಜಿಂದಗಿ ಯಿಂದ ರೆವಿನ್ಯೂ ಕಂದಾಯದ ಬಾಕೀಯಂತೆ ವಸೂಲ್ಮಾಡಲ್ಪಡುವದು, ಆ ಹರಾಜಿನಲ್ಲಿ ಜಾಸ್ತೀ ಹುಟ್ಟಿದರೆ ಚಡ ಸವಾಲ್ದಾರನಿಗೆ ಜಾಸ್ತೀ ಮೊಬಲಗ್ಯೆ ಹಕ್ಕು ಯಿಲ್ಲಾ, ಹರಾಜು ದೀವಾ|| ಸಾಹೆಬರವರಿಂದ ಮಂಜೂರ್ ಮಾಡಲ್ಪಟ್ಟ ಸಂಗತಿಯನ್ನು ಬರವಣಿಗೆ ಮೂಲಕವಾಗಿ ಚಡ ಸವಾಲ್ದಾರನಿಗೆ ತಿಳಿಸಿದ 3 ದಿವಸಗಳ ವಳಗಾಗಿ ಅವನು ಬಾಕೀ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗ್ಯೆ ರೂಪಾಯಿ 1ಕ್ಕೆ 1ಆಣೆ ಮೇರಿಗೆ ಲೋಕಲ್ ಸೆಸ್ ಸಹ ಪಾವತೀ ಮಾಡಿ ಕಟ್ಟಡ ಸ್ವಾಧೀನಕ್ಕೆ ಪಡಿಯಬೇಕು, ಬಾಕೀ ಹಣ ಲೊಕಲ್ ಸೆಸ್ ಸಹಾ ಕೊಡುವದಕ್ಕೆ ತಪ್ಪಿದರೆ ತೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಪುನಃ ಹರಾಜು ಹಾಕಿಸಿ ಲುಕಸಾರ್ ಮೊಬಲಗನ್ನ ತಪ್ಪಿದ ಚಡ ಸವಾಲ್ದಾರನಿಂದ ರೆವಿನ್ಯು ಕಂದಾಯದಂತೆ ವಸೂಲ್ಮಾಡಲಾಗೀತು.

ಜೆ. ರಘುನಾಥರಾವ್,
ಛಾರ್ ಜೆ|| ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 21ನೇ ಏಪ್ರಿಲ್ 1884.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳೀಯಲ್ಲಿಲ್ಲದ ಕಂದಾಯ ಠರಾಯಿಸಲ್ಪಟ್ಟ ಮತ್ತು ಕಂದಾಯ ಠರಾಯಿಸಲ್ಪಡದ ತವಾಂ ಜರ್ಮಿ ಜಮೀನುಗಳು, ಗ್ಯಾವು ಬೇಲೀಗಳು, ಅಮರಾಯಿ ವ ಅಮರಾಯಿ ಬೇಲೀಗಳು, ಇವುಗಳು ಅಜಗಿರುವ ಡಿಸ್ಟ್ರಿಕ್ಟು ಜಂಗ್ಲೀಗಳ ಪಸಾರೀ ಹುಟ್ಟುವಳೀಯನ್ನು, 1885ನೇ ಮಾರ್ಚೀ 31ರ ವರಿಗೆ ಜಮಾಇಸುವ ಹಕ್ಕುದಾರೀಯು, ತಾಲ್ಲೂಕುವಾರಾಗಿ ಬಹಿರಂಗವಾದ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರಿಂದ, 1884ನೇ ಜೂ|| 5ನೇ ಮರ್ತುಂ ಮಧ್ಯಾನ್ಹ ವಿಕ್ರಯಿಸಲ್ಪಡುವದು.

ತಾಲ್ಲೂಕು.	ಹುಟ್ಟುವಳಿಯ ತಪಸೀಲ್.
ಮೈಸೂರು ಹೆಗ್ಗಡದೇವನಕೋಟೆ ಹುಣಸೂರು ಗುಂಡ್ಲುಪೇಟೆ ನಂಜನಗೂಡು ಚಾಮರಾಜನಗರ ತಿರುಮಕೋಡ್ಲು ನರಸೀಪುರ ಮಂಡ್ಯ ಶ್ರೀರಂಗಪಟ್ಟಣ ಯಡತೋರೆ	1 ಅಳಲೇಕಾಯಿ, 2 ತಾರೇಕಾಯಿ, 3 ಸೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದ ಬಂಕೆ, 6 ಕಾಡು ಅರಿಸಿನ, 7 ಜೇನುಮೇಣ, ವ ಜೇನುತುಪ್ಪ, 8 ಅರಗು, 9 ಕಪಿಲೇರಂಗು, 10 ಪಚ್ಚೆಪಚಕ್ಕೆ, 11 ಪತಂಗ, 12 ಮಡ್ಡಿ, 13 ಚಕ್ಕದಬೀಜ, 14 ಚೆಗಚಿಕೆ ಬೀಜ, 15 ಹೊಂಗೇಬೀಜ, 16 ಗೇರುಬೀಜ, 17 ಹಾಲು ಮಡ್ಡಿ, ಆವರಿಕೇ ಬಂಕೆ, 19 ಸಾರಗದ ಕೊಂಬು, 20 ಗುಗ್ಗಳ ವಗೈರೇ.

ಇಜಾರೇದಾರರಿಗೆ, ಹಿಡುವಳೀ ಜರ್ಮಿಗಳಲ್ಲೂ ಸ್ವಂತ ಅಮರಾಯಿಗಳಲ್ಲೂ ಯಿರುವ ಮರಗಳ ಹುಟ್ಟುವಳೀ ವಿಷಯದಲ್ಲಿ ಯಾವ ಹಕ್ಕುದಾರಿಯೂ ಉಂಟಾಗತಕ್ಕದ್ದಲ್ಲವು.